ದಿನಾಂಕಃ 06.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 5 & 6ನೇ ಪ್ರತಿವಾದಿಯರ ಪರ ವಕೀಲರಿಂದಃ**

ನನ್ನ ಅಜ್ಜನ ಹೆಸರು ವೆಂಕಟರಾಮ ಸಿದ್ದಪ್ಪ ಹೊನಕುಪ್ಪಿ ಅಂತಾ ಇರುತ್ತದೆ. ನಮ್ಮ ಅಜ್ಜನ ತಂದೆ ಸಿದ್ದಪ್ಪನಿಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಅವರೆಂದರೆ ಭೀಮಪ್ಪ, ಅರ್ಜುನ, ವೆಂಕಟರಾಮ ಮತ್ತು ಲಕ್ಷ್ಮವ್ವ ಅಂತಾ ಇರುತ್ತಾರೆ. ಸನ್ 1980 ಕ್ಕಿಂತ ಮುಂಚೆ ಸದರಿ ಮೇಲೆ ಹೇಳಿದ ನಮ್ಮ ಅಜ್ಜ ಹಾಗೂ ಆತನ ಸಹೋದರರ ಮಧ್ಯ ಒಂದು ಪಾಲು ವಾಟ್ನಿ ದಾವೆಯಾಗಿ ಅದರಲ್ಲಿ ಎಲ್ಲರಿಗೂ ¼ ಅಂಶ ಸಮನಾಗಿ ಹಿಸ್ಸೆ ಬಂದಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಮುಂಚೆ ನಮ್ಮ ಮುತ್ತಜ್ಜ ಸಿದ್ದಪ್ಪನ ಹೆಸರಿಗೆ 11 ಎಕರೆ ಜಮೀನು ಇತ್ತು. ಆ ಪೈಕಿ ನಮ್ಮ ಅಜ್ಜ ವೆಂಕಟರಮನಿಗೆ 2 ಎಕರೆ 30 ಗುಂಟೆ ಜಮೀನು ಬಂದಿತ್ತು. ನಿರುಪಾದ ಎಂದರೆ ನನ್ನ ತಂದೆ ಇರುತ್ತಾರೆ. ಅವರು ವೆಂಕಟರಮನನ ಮಗ. ವೆಂಕಟರಮನ ತೀರಿಕೊಂಡ ನಂತರ ಸದರಿ ಆಸ್ತಿಯು ನಿರುಪಾದಿಯ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ನಿಜ.

ದಾವಾ ಆಸ್ತಿಗಳಾದ 1 ಎಕರೆ 28 ಗುಂಟೆ ಹಾಗೂ 1 ಎಕರೆ 2 ಗುಂಟೆ ಜಮೀನುಗಳ ಚಕ್ಕಬಂದಿ ಹೇಳಬಲ್ಲಿರಾ ಎಂದರೆ ಸಾಕ್ಷಿಯು ಎರಡು ಜಮೀನುಗಳು ಒಂದು ಡಾಗ್ ಇದ್ದು, ಒಂದೇ ಚೆಕಬಂದಿ ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಮುತ್ತಜ್ಜ ಸಿದ್ದಪ್ಪನ ಆಸ್ತಿಯಲ್ಲಿ ಆತನ ಮಗಳು ಲಕ್ಷ್ಮವ್ವಳಿಗೆ ಪಾಲು ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಮನೆತನದ ಅಡಚಣೆಗಾಗಿ ನನ್ನ ತಂದೆ ನಿರುಪಾದಿಯವರು 5 ಮತ್ತು 6ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳ ಪೈಕಿ 1 ಎಕರೆ 28 ಗುಂಟೆ ಜಮೀನನ್ನು ಸನ್ 2009 ರಲ್ಲಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ಸದರಿ ಜಮೀನನ್ನು ಮಾರಾಟ ಮಾಡಿದ ನಂತರ ಸನ್ 2010 ರಲ್ಲಿ ನಾನು ಹಾಗೂ 1 ರಿಂದ 4ನೇ ಪ್ರತಿವಾದಿ ಸೇರಿಕೊಂಡು ನಮ್ಮ ತಂದೆ ನಿರುಪಾದಿ ಹಾಗೂ 5 ಮತ್ತು 6ನೇ ಪ್ರತಿವಾದಿಯರ ಮೇಲೆ ಓ.ಎಸ್.ನಂ.629/2010 ರಂತೆ ದಾವೆ ಮಾಡಿರುತ್ತೇವೆ ಎಂದರೆ ಮಾಡಿರಬಹುದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾವು ಅಪಸಾತ ಅರ್ಜಿ ಸಲ್ಲಿಸಿದ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ನಮ್ಮೆಲ್ಲರ ಪರವಾಗಿ ನಮ್ಮ ತಾಯಿ ಸಹಿ ಮಾಡಿ ಅಪಸಾತ ಮಾಡಿಕೊಂಡಿರುತ್ತಾಳೆ ಎಂದರೆ ಆ ಸಮಯದಲ್ಲಿ ರಾಜಿ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಹಾಜರಪಡಿಸಿದ ಅಪಸಾತ ಅರ್ಜಿಯನ್ನು ತೋರಿಸಿ ಅದರಲ್ಲಿ ಸಾಕ್ಷಿಯ ತಂದೆ ಹಾಗೂ ತಾಯಿಯ ಭಾವಚಿತ್ರಗಳನ್ನು ತೋರಿಸಿ ಗುರುತಿಸಲು ಕೇಳಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ಮುಖಾಬಲೆಯಾಗಿ ನಿಡಿ.1 ಎಂದು ಗುರುತಿಸಲಾಯಿತು.

ಸದರಿ ನಿಡಿ.1 ರಂತೆ ನನ್ನ ತಂದೆ ನಮ್ಮೆಲ್ಲರ ಪರವಾಗಿ ಸದರಿ ಮೇಲೆ ಹೇಳಿದ 1 ಎಕರೆ 28 ಗುಂಟೆ ಜಮೀನನ್ನು 5 ಮತ್ತು 6ನೇ ಪ್ರತಿವಾದಿಯರಿಗೆ ಕುಟುಂಬದ ಅಡಚಣೆಗಾಗಿ ಮಾರಾಟ ಮಾಡಿದ್ದು, ಮಾರಾಟ ಮಾಡಿದ ದಿನದಿಂದ ಅವರೇ ಕಬ್ಜಾ ವಹಿವಾಟಿಯಲ್ಲಿ ಇರುವ ಬಗ್ಗೆ ಒಪ್ಪಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಆ ಬಗ್ಗೆ ಈ ಮೇಲೆ ಹೇಳಿದಂತೆ ನಮ್ಮ ತಾಯಿ ಒಪ್ಪಿಕೊಂಡಿದ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ಸದರಿ ಜಮೀನನ್ನು 5 ಮತ್ತು 6ನೇ ಪ್ರತಿವಾದಿಯರಿಂದ ಕಿತ್ತುಕೊಳ್ಳಬೇಕೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜನ್ಮ ದಿ:30.04.1999 ಇರುತ್ತದೆ. ಸದರಿ ಮೇಲೆ ಹೇಳಿದ ಓ.ಎಸ್.ನಂ.629/2010 ದಾವೆಯು ರಾಜಿಯಾದ ನಂತರ ಹೇಗಾದರೂ ಮಾಡಿ 5

ಮತ್ತು 6ನೇ ಪ್ರತಿವಾದಿಯರಿಂದ ಮೇಲೆ ಹೇಳಿದ ದಾವಾ ಆಸ್ತಿಯನ್ನು ಕಿತ್ತುಕೊಳ್ಳಬೇಕೆಂಬ ಉದ್ದೇಶದಿಂದ ನಮ್ಮ ಅಜ್ಜನ ತಂಗಿಯಾದ ಲಕ್ಷ್ಮವ್ವ ಇವಳ ಮೂಲಕ ಓ.ಎಸ್.ನಂ.211/2011 ರಂತೆ ಭೀಮಪ್ಪ, ಅರ್ಜುನ, ಸೋನವ್ವ, ನನ್ನ ತಂದೆ ನಿರುಪಾದಿ ಹಾಗೂ 5 ಮತ್ತು 6ನೇ ಪ್ರತಿವಾದಿಯರ ವಿರುದ್ದ ಮತ್ತೊಂದು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಹೂಡಲು ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ ಎಂದು ಮಾನ್ಯ ನ್ಯಾಯಾಲಯದವರು ಸದರಿ ದಾವೆಯನ್ನು ವಜಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಮೇಲೆ ಹೇಳಿದ ಓ.ಎಸ್.ನಂ.629/2010 ನೇದ್ದು ಚಾಲ್ತಿಯಲ್ಲಿರುವಾಗಲೇ ನನ್ನ ತಂದೆ ದಾವಾ ಆಸ್ತಿ ಪೈಕಿ 1 ಎಕರೆ ಜಮೀನಿಗೆ ಸಂಬಂಧಿಸಿದಂತೆ 5ನೇ ಪ್ರತಿವಾದಿಗೆ ಬಿನ್ ಕಬ್ಜಾ ಖರೀದಿ ಕರಾರ ಪತ್ರವನ್ನು ದಿ:16.08.2010 ರಂದು ಬರೆದುಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಸರಾಯಿ ಕುಡಿಯುತ್ತಿದ್ದು, ಮೋಸದಿಂದ ಆತನಿಂದ ಸದರಿ ಪತ್ರವನ್ನು ಬರೆಸಿಕೊಂಡಿರಬಹುದು ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸದರಿ 5ನೇ ಪ್ರತಿವಾದಿಯ ಸರಾಯಿ ಅಂಗಡಿಗೆ ನನ್ನ ತಂದೆ ಸರಾಯಿ ಕುಡಿಯಲು ಹೋಗುತ್ತಿದ್ದು, ಅವರಿಬ್ಬರು ಗೆಳೆಯರಾಗಿದ್ದರು ಎಂದು ನುಡಿಯುತ್ತಾರೆ. ಈ ರೀತಿ ನಾನು ಸದರಿ ಸಂಗತಿಯನ್ನು ಹುಟ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ಮತ್ತು 6ನೇ ಪ್ರತಿವಾದಿಯರು ಸದರಿ ದಾವಾ ಆಸ್ತಿಗಳನ್ನು ಖರೀದಿ ಮಾಡುವ ಕಾಲಕ್ಕೆ ಅವುಗಳಿಗೆ ಸಂಬಂಧಿಸಿದ ಎಲ್ಲಾ ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡಿದ ನಂತರ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸನ್ 2009 ರಲ್ಲಿ ದಾವಾ ಆಸ್ತಿಗಳ ಪೈಕಿ 1 ಎಕರೆ 28 ಗುಂಟೆ ಜಮೀನನ್ನು ರೂ.2,45,000/- ಗಳಿಗೆ 5 ಮತ್ತು 6ನೇ ಪ್ರತಿವಾದಿಯರಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮಾರಾಟದ ಹಣವನ್ನು ನನ್ನ ತಂದೆ ನಮ್ಮ ಕುಟುಂಬದ ಸಾಲವನ್ನು ತೀರಿಸಲು ಹಾಗೂ ಮನೆಯ ಇನ್ನಿತರ ಖರ್ಚಿಗಾಗಿ ಉಪಯೋಗಿಸಿರುತ್ತಾನೆ ಎಂದರ ಸರಿಯಲ್ಲ. ಸದರಿ ಜಮೀನು ಮಾರಾಟ ಮಾಡಿದಾಗಿನಿಂದ 5 ಮತ್ತು 6ನೇ ಪ್ರತಿವಾದಿಯರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಾಗಿದ್ದು, ಕಬ್ಜೆಯಲ್ಲಿ ಇರುತ್ತಾರೆ ಎಂದರೆ ನಿಜ.

ಈಗ 5 ಮತ್ತು 6ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಮ್ಮ ಮನೆಯವರೆಲ್ಲರೂ ಸೇರಿಕೊಂಡು ಖೊಟ್ಟಿ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನದಲ್ಲಿ ನಮಗೆ ಯಾವುದೇ ಹಕ್ಕು ಉಳಿಯದೇ ಇದ್ದರೂ ಸಹ ಖೊಟ್ಟಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಹಾಗೂ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ** 1 ರಿಂದ 4 ನೇ ಪ್ರತಿವಾದಿಯರ ಪರ ವಕೀಲರಿಂದ:

ಸದರಿಯವರ ಪರವಾಗಿ ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ